ಶ್ರೀ ಎ. ಶಂಕರ ಆಳ್ವ.—ಅದನ್ನು ತನಿಖೆ ಮಾಡುತ್ತಿದ್ದೇವೆ. ಯಾವ ಅಧಿಕಾರಿ ಇದಕ್ಕೆ ಕಾರಣ ಇರುತ್ತಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ಈಗ ಸಾಲ ಕೊಟ್ಟಿದ್ದರಲ್ಲಿ ಮತ್ತು ದುರುಪಯೋಗವಾದ ಹಣದಲ್ಲಿ ಟೈಂ ಬಾರ್ಡ್ ಕೇಸುಗಳು ಎಷ್ಟು ಇವೆ?

ಶ್ರೀ ಎ. ಶಂಕರ ಆಳ್ವ.—ಅದರ ಎಷ್ಟರ ಹೇಳುವುದಕ್ಕೆ ನನ್ನಲ್ಲಿ ಮಾಹಿತಿ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ಸರ್ಕಾರಿ ನೌಕರರು ಬಡ ನೌಕರರು. ಸಹಕಾರಿ ಸಂಘಗಳಿಗೆ ಸೇರಿದರೆ ಸಹಕಾರೀ ತತ್ವದಿಂದ ಅನುಕೂಲವಾಗಬಹುದು ಎಂದು ಇದಕ್ಕೆ ಎಲ್ಲರೂ ಸೇರಿದ್ದಾರೆ. ಆದರೆ ಅವರ ರಿಪೋರ್ಟಿನಲ್ಲಿ ಈ ರೀತಿ ಹೇಳಿದ್ದಾರೆ :—

> "Sustained efforts are being made to recover this amount, since most of the defaulters have to pay heavy sums towards Government dues, we are finding it difficult to effect recoveries from them".

ಅಂದರೆ ಹಣವಂತೂ ಗ್ಯಾರೆಂಟಿ ಬರುವುದಿಲ್ಲ. ಸರ್ಕಾರದವರು ನುಮಾರು 6 ಲಕ್ಷ ರೂಪಾಯಿಯನ್ನು 5 ಮತ್ತು 6 ಪರ್‌ಸೆಂಟ್ ಬಡ್ಡಿಗೆ ಕೊಟ್ಟಿದ್ದೀರಿ. ಆಗಲೇ 4 ಲಕ್ಷ ರೂಪಾಯಿ ಹೊರಟು ಹೋಗಿದೆ. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ. - ಆದಷ್ಟು ಪ್ರಯತ್ನ ಮಾಡಿ ಯಾರಿಂದ ವಸೂಲು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡುತ್ತೇವೆ.

Work Charged Establishment of Public Works Department

451. Sri KAGODU THIMMAPPA (Sagar).—

Will the Minister for Public Works and Electricity be pleased to state :—

(*a*) the number of persons who are working on the work-charged establishment of the State Public Works Department ;

(*b*) whether demands have been received to make their services permanent and grant them pension etc., also ;

(*c*) if so, the action taken b y the Government in this behalf ?

Sri H. M. CHANNABASAPPA (Minister for Public Works and Electricity).—

(*a*) As per figures on 1st January 1972, 12,000 persons were working on the work-charged establishment. Now it may be more.

(*b*) Yes.

(*c*) It is not possible to make them permanent and grant pension.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ 12 ಸಾವಿರ ಜನ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಜನ ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುತ್ತೀರಾ?

†ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ಆಗಾಗ್ಗೆ ವ್ಯತ್ಯಾಸ ಆಗುತ್ತಾ ಇದೆ. 12 ಸಾವಿರ 1-1-1972 ರಲ್ಲಿ ವರ್ಕ್ಸ್ ಚಾರ್ಜ್ಡ್ ಅಂದರೆ ಆಯಾ ಕೆಲಸಕ್ಕೆ ಅವಶ್ಯಕತೆ ಕಂಡಾಗ ಅವಶ್ಯ ಪ್ರಮಾಣದಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಕೆಲಸ ಕಡಿಮೆ ಇದ್ದಾಗ ಜನ ಕಡಿಮೆಯಾಗುತ್ತಾರೆ ಹೆಚ್ಚು ಕೆಲಸ ಇದ್ದಾಗ ಹೆಚ್ಚಾಗುತ್ತಾರೆ. ಅದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—5 ವರ್ಷಕ್ಕೆ ಮೇಲ್ಪಟ್ಟು ಸೇವೆ ಸಲ್ಲಿಸಿರತಕ್ಕಂತಹ ಜನರು ಎಷ್ಟು ; ಮತ್ತು 10 ವರ್ಷಕ್ಕಿಂತ ಹೆಚ್ಚು ಸೇವೆ ಮಾಡಿರತಕ್ಕಂತಹ ಜನರು ಎಷ್ಟು ಎಂದು ಹೇಳುತ್ತೀರಾ ?

Sri H. M. CHANNABASAPPA.— It would be very difficult to collect the information. If the hon. member wants I have no objection to do some exercise and collect the information.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—12 ಸಾವಿರ ಜನರು ವರ್ಕ್ ಚಾರ್ಜ್ಡ್ ಎಸ್ಟೇಬ್ಲಿಷ್‌ಮೆಂಟನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಅನೇಕರು 5—10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಇವರನ್ನು ಸಹ ಸರ್ಕಾರೀ ನಿಯಮದ ಪ್ರಕಾರ ಎಸ್. ಸಿ., ಎಸ್.ಟಿ. ಮತ್ತು ಲ್ಯಾಂಡ್‌ಲೆಸ್ ಜನರಿಗೆ ಯಾವ ಪರ್‌ಸೆಂಟೇಜ್ ಕೊಡಬೇಕು, ಅದನ್ನು ಕೊಟ್ಟು ನೇಮಕ ಮಾಡುತ್ತೀರಾ ?

ಶ್ರೀ ಎಚ್. ಎಂ ಚನ್ನಬಸಪ್ಪ.—ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ 18 ಪರ್ ಸೆಂಟ್ ನಿಗದಿ ಮಾಡುವುದಕ್ಕಾಗುವುದಿಲ್ಲ. ಕೆಲಸಕ್ಕೆ ಕೂಲಿಗಾರರು ಬೇಕಾದಾಗ ಅವರನ್ನು ನೇಮಕ ಮಾಡಿಕೊಳ್ಳುತ್ತಾರೆ. ಆದ್ದರಿಂದ 18 ಪರ್‌ಸೆಂಟ್ ರಿಸರ್ವೇಶನ್ ಇಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಹೈದರಾಬಾದ್ ಕರ್ನಾಟಕದಲ್ಲಿ ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟಿನವರದ್ದು ಒಂದು ಯೂನಿಯನ್ ಸಹ ಇದೆ. ಆ ಸಂಘದವರು ಒಂದು ವಿಚಾರವನ್ನು ಕೋರ್ಟಿಗೆ ತಗೆದುಕೊಂಡು ಹೋದಾಗ, ಕೋರ್ಟಿನಲ್ಲಿ ಅವರನ್ನು ಕಾನೂನು ಪ್ರಕಾರ ಪರ್ಮನೆಂಟ್ ಮಾಡಬೇಕೆಂದು ತೀರ್ಮಾನ ಕೊಟ್ಟಿಲ್ಲವೇ ; ಮತ್ತು ಹಾಗೆ ಕೋರ್ಟಿನ ತೀರ್ಮಾನದ ಪ್ರಕಾರ,ಅವರನ್ನು ಪರ್ಮನೆಂಟ್ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಜನರು ಇಂಡಸ್ಟ್ರಿಯಲ್ ಕೆಲಸಗಾರರು ಅಲ್ಲ. ಕೋರ್ಟು ಡಿಸಿಪನ್ ಕೊಟ್ಟರೆ ಎನ್ನುವುದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೆಲಸಗಾರರ ಬಗ್ಗೆ ಮನ್ನರ್ ರೋರ್ ಇಟ್ಟಿದ್ದೀರಾ ? ಮತ್ತು ಅವರಿಗೆ ಕೊಟ್ಟಿರತಕ್ಕಂತಹ ಕೆಲಸ ಒಂದೇ ತರಹದ ಕೆಲಸವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ್ಯಾವ ಕೆಲಸ ಯಾವ್ಯಾವ ತರಹದ್ದು ಎಂದು ಇಲ್ಲಿ ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

9-30 A.M.

Releasing of water from Ramaswamy Nala

573. Sri K. MADE GOWDA (Bannur).—

Will the Minister for Public Works and Electricity be pleased to state :—

(*a*) the extent of land under Ramaswamy Nala Actchkat in T. Narasipur Taluk (in acres) ;

(*b*) whether it has come to the notice of the Government if water from Ramaswamy Nala is released for 2 days in the months of February and April, it would be helpful for ragi crop ;

(*c*) the difficulties in releasing the water for few days during the above two months in view of such benefit ?